**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 25.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2, 3, 10 ಮತ್ತು 11 ನೇ ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರುತ್ತದೆ. ಸರ್ವೆ ನಂ.750 ಹೊರತುಪಡಿಸಿ ಹುಬ್ಬಳ್ಳಿಯಲ್ಲಿ ನಮ್ಮ ಮನೆತನದ ಇನ್ನೊಂದು ಆಸ್ತಿ ಇದೆ ಎಂದರೆ ಸರಿ. ಅದರ ಸರ್ವೆ ನಂ.197 ಕ ಎಂದರೆ ಸರಿ. ಸದರಿ ಸರ್ವೆ ನಂಬರ ಈಗ ಕೃಷಿಯೇತರ ಜಮೀನಾಗಿ ಪರಿವರ್ತಿಸಿ ಅದರಲ್ಲಿ ಪ್ಲಾಟ್‌ಗಳನ್ನು ಮಾಡಿ ಮಾರಾಟ ಮಾಡಲಾಗಿದೆ ಎಂದರೆ ಸರಿ. ಪ್ರತಿವಾದಿ ನಂ.3 ನನ್ನ ಮಾವ ಆಗಬೇಕು. ಸದರಿ ಪ್ರತಿವಾದಿ ನಂ.3 ಇವರು ನನ್ನ ತಾಯಿಯ ವಿರುದ್ಧ ಅಸಲು ದಾವಾ ನಂ.309/1988 ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ರಾಜೀಯಾಗಿರುತ್ತದೆ ಎಂದರೆ ಸರಿ. ಪ್ಲಾಟ್ ನಂ.53 ರಲ್ಲಿ ಹನಮಂತ ದೇವರ ದೇವಸ್ಥಾನ ಇದೆ ಎಂದರೆ ಸರಿ. ನಾಗವ್ವ ಎಂದರೆ ನನ್ನ ದೊಡ್ಡವ್ವ. ಆಕೆ ಈಗ ತೀರಿಕೊಂಡಿರುತ್ತಾಳೆ. ನಾಗವ್ವ ಈಕೆಯ ಗಂಡ ತೀರಿಕೊಂಡಿರುತ್ತಾರೆ ಮತ್ತು ಮಕ್ಕಳು ಇದ್ದಾರೆ. ಅವರ ಹೆಸರು ಚಂದ್ರಶೇಖರ, ನಾಗಪ್ಪ ಮತ್ತು ಶ್ರೀಕಾಂತ. ಅಸಲು ದಾವಾ ನಂ.309/1988 ರಾಜೀಯಾದಾಗ ನನ್ನ ತಾಯಿ ಯಲವ್ವ ಮತ್ತು ಸದರಿ ನಾಗವ್ವ ಇವರಿಗೆ ಹಿಸ್ಸೆ ಕೊಟ್ಟರು ಎಂದರೆ ಸರಿ. ಸದರಿ ಪ್ರಕರಣದ 1988 ರಲ್ಲಿ ಮುಗಿದಿರುತ್ತದೆ ಎಂದರೆ ಸರಿ. ಸದರಿ ರಾಜೀ ಡಿಕ್ರಿಯ ಪ್ರಕಾರ ಸರ್ವೆ ನಂ.197/1 ರಲ್ಲಿ ಪ್ಲಾಟ್ ಸಂ.40 ಕೊಡಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ಅಸಲು ದಾವಾ ನಂ.309/1988 ರಲ್ಲಿನ ರಾಜೀ ಪತ್ರದ ದೃಢಿಕೃತ

ಪ್ರತಿಯನ್ನು ತೋರಿಸಿ ಆ ಪ್ರಕಾರ ರಾಜೀಯಾಗಿತ್ತು ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ್ದು ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ನನ್ನ ತಾಯಿಯ ಹೆಸರಿಗೆ ಬಂದ ಆಸ್ತಿಯನ್ನು ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಾಯಿ ನನ್ನ ದೊಡ್ಡಮ್ಮನ ಮಗ ಚಂದ್ರಶೇಖರ ಕರ್ಜಗಿರವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕರ್ಜಗಿರವರು ಪುನಃ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚಂದ್ರಶೇಖರ ಬಸಪ್ಪ ಕರ್ಜಗಿ ಇವರ ಹೆಸರಿಗೆ ನಿಮ್ಮ ತಾಯಿ ಮಾಡಿಕೊಟ್ಟ ಖರೀದಿ ಪತ್ರವನ್ನು ಈ ದಾವೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ರಾಜೀಯಾದ ಆಸ್ತಿಗೆ ಈ ದಾವೆಯನ್ನು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಬಗ್ಗೆ ವಾದಪತ್ರದಲ್ಲಿ ಸಹ ನಮೂದಿಸಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿ ಬಗ್ಗೆ ರಾಜೀಯಾದ ಕಾರಣ ನಾವು ಆ ಬಗ್ಗೆ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಾಗವ್ವ ಸಹ ಆಕೆಯ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಪ್ರತಿವಾದಿ ನಂ.3 ಮತ್ತು ಆತನ ಅಣ್ಣ ಸೇರಿ ಹನಮಂತ ದೇವರ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾರೆ ಎಂದರೆ ಸರಿ. ಸದರಿ ದೇವಸ್ಥಾನದಲ್ಲಿ ನಾನು ಪೂಜೆ ಮಾಡುವುದಿಲ್ಲ. ಸದರಿ ಆಸ್ತಿ ಮುಂಚೆಯಿಂದ ಹನಮಂತ ದೇವರ ಪೂಜೆಗೆ ನೀಡಿದ ಆಸ್ತಿ ಎಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಒಂದು ಪತ್ತಾ ಬುಕ್ ಸಹ ನೀಡಲಾಗಿದೆ ಎಂದು ಕೇಳಿ ಸಾಕ್ಷಿಗೆ ಸದರಿ ಪುಸ್ತಕವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ಆ ಬಗ್ಗೆ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಮೂಲತಃ ನನ್ನ ಅಜ್ಜನಿಂದ ಬಂದಿರುತ್ತದೆ. ಆ ಬಗ್ಗೆ ದಾಖಲೆ ಹಾಜರಪಡಿಸಿರುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನನ್ನ ತಾಯಿಗೆ ಗೊತ್ತು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.750

ಹನಮಂತ ದೇವರ ಪೂಜೆಗೆಂದು ಕೊಟ್ಟ ಆಸ್ತಿ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ 2, 3, 10 ಮತ್ತು 11 ನೇ ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**